O.S.No. 29/2012 P W - 1

ದಿನಾಂಕ 22.03.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.R.C. ವಕೀಲರಿಂದ :

ವಾದಿ ನಾಗಮ್ಮ ನನ್ನ ತಾಯಿ. ನನ್ನ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ನಾನೇ ಹೇಳಿಸಿ ಬರೆಸಿರುತ್ತೇನೆ. ನನ್ನ ತಾಯಿ ಮರಿಯಮ್ಮ, ರೇಣುಕಾ ಮತ್ತು ಶಿವರಾಜ್ ರವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ. ರೇಣುಕಾ ಮತ್ತು ಶಿವರಾಜ್ 1 ನೇ ಪ್ರತಿವಾದಿಯ ಮಕ್ಕಳು.

ನಾನು ಬಿಎ ವರೆಗೂ ವ್ಯಾಸಂಗ ಮಾಡಿದ್ದೇನೆ. ದಾವಾ ಸ್ವತ್ತು ಖಾನೇಷುಮಾರಿ ನಂಬರ್ 3232/2 ಆಗಿರುತ್ತದೆ. ಪೂರ್ವ ಪಶ್ಚಿಮ 40, ಉತ್ತರ ದಕ್ಷಿಣ 30 ಅಡಿ ವಿಸ್ತೀರ್ಣ ಕ್ಕೆ ದಾವೆಯನ್ನು ಹೂಡಿರುತ್ತೇವೆ. ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವ ಕ್ಕೆ ಗೌರಮ್ಮ ನವರ ಸ್ವತ್ತು, ಪಶ್ಚಿಮಕ್ಕೆ ಮರಿಯಮ್ಮ ರವರ ಸ್ವತ್ತು, ಉತ್ತರ ರಸ್ತೆ ಮತ್ತು ದಕ್ಷಿಣಕ್ಕೆ ರಂಗಮ್ಮ ರವರ ಸ್ವತ್ತು.

ಪಶ್ಚಿಮಕ್ಕೆ 1 ನೇ ಪ್ರತಿವಾದಿ ಮರಿಯಮ್ಮ ರವರ ಜಮೀನು. ದಾವಾ ಸ್ವತ್ತು ಮೂಲತಃ ನನ್ನ ತಾಯಿಗೆ ಸೇರಿದ್ದಾಗಿರುತ್ತದೆ. ನನ್ನ ತಾಯಿ ನಾಗಮ್ಮ ಲಕ್ಷಮ್ಮ ರವರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು. ಲಕ್ಷಮ್ಮ ರವರು ಗೋಪಾಲ್ ಮತ್ತು ಸತ್ಯ ನಾರಾಯಣ್ ರವರಿಂದ ಖರೀದಿ ಮಾಡಿರುತ್ತಾರೆ. ಲಕ್ಷಮ್ಮ ರವರು ಗೋಪಾಲ್ ಮತ್ತು ಸತ್ಯ ನಾರಾಯಣ್ ರವರಿಂದ ಖರೀದಿ ಮಾಡಿದ ತಿಂಗಳು, ದಿನ ಮತ್ತು ವರ್ಷ ಗೊತ್ತಿಲ್ಲ. ಸತ್ಯ ನಾರಾಯಣ್ ರವರು ತಾಯಮ್ಮ ರವರಿಂದ ಖರೀದಿ ಮಾಡಿರುತ್ತಾರೆ ಆದರೆ ಯಾವಾಗ ಎಂದು ಗೊತ್ತಿಲ್ಲ. ತಾಯಮ್ಮ ರವರು ಸಾವಿತ್ರಮ್ಮ ರವರಿಂದ ಖರೀದಿ ಮಾಡಿರುತ್ತಾರೆ.

ತಾಯಮ್ಮ ರವರು ಸಾವಿತ್ರಮ್ಮ ರವರಿಂದ 30X43 ಅಡಿಯನ್ನು ಖರೀದಿ ಮಾಡಿದ್ದರು ಆದರೆ ತಿಂಗಳು, ದಿನ ಮತ್ತು ವರ್ಷ ಗೊತ್ತಿಲ್ಲ. ಸಾವಿತ್ರಮ್ಮ ರವರು ಮರಿಯಮ್ಮ ರವರಿಂದ 1990 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ.ಸತ್ಯ

ನಾರಾಯಣ್ ರವರು ಲಕ್ಷ್ಮಮ್ಮ ರವರಿಗೆ 20*30 ವಿಸ್ತೀರ್ಣ ವನ್ನು ಮಾರಾಟ ಮಾಡಿದ್ದರು. ಗೋಪಾಲ್ ರವರು 20*30 ವಿಸ್ತೀರ್ಣ ವನ್ನು ಲಕ್ಷಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ.

ಮರಿಯಮ್ಮ ರವರು 1990 ನೇ ಇಸವಿಯಲ್ಲಿ ಸಾವಿತ್ರಮ್ಮ ರಿಗೆ ಯಾವುದೇ ಸ್ವತ್ತನ್ನು ಮಾರಾಟ ಮಾಡಲಿಲ್ಲ ಎಂದರೆ ಸರಿಯಲ್ಲ. ಮರಿಯಮ್ಮ ರವರು ಸ್ವತ್ತನ್ನು ಮಾರಾಟ ಮಾಡದೇ ಇದ್ದರೂ ಸಹ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಹಾರೋಹಳ್ಳಿ ಗ್ರಾಮದ ಸರ್ವೆ ನಂ. 11 ರ 3 ವರೆ ಗುಂಟೆ ಜಮೀನು ಮರಿಯಮ್ಮ ರವರಿಗೆ ಸೇರಿದ್ದು ಎಂದರೆ ಸರಿ. ಮೂರೂವರೆ ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ 2 ನಿವೇಶನಗಳನ್ನು 1990 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ. 11 ರ ಮೂರುವರೆ ಗುಂಟೆ ಸಿದ್ದಯ್ಯ ರವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ಸಿದ್ದಯ್ಯ ರವರು 1 ನೇ ಪ್ರತಿವಾದಿಯ ಮಾವ.

ಸಿದ್ದಯ್ಯ ಮರಣದ ನಂತರ 1 ನೇ ಪ್ರತಿವಾದಿಯ ಗಂಡನಿಗೆ ಬಂದಿರುತ್ತದೆ ಎಂದರೆ ಸರಿ. ಸಿದ್ದಯ್ಯ ರವರ ಮರಣದ ನಂತರ 1 ನೇ ಪ್ರತಿವಾದಿಯ ಗಂಡ ಸ್ವಾಧೀನದಲ್ಲಿದ್ದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಮರಣದ ನಂತರ 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಮೂರುವರೆ ಗುಂಟೆ ಅವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಮರಿಯಮ್ಮ ರವರಿಗೆ 3 ಜನ ಗಂಡು ಮಕ್ಕಳು. 1 ನೇ ಪ್ರತಿವಾದಿಯ ಹಿರಿಯ ಮಗನಿಗೆ ವಿವಾಹವಾಗಿರುತ್ತದೆ ಆದರೆ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹಿರಿಯ ಮಗ ಜೀವಂತವಾಗಿ ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ.

1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾದ್ದರಿಂದ ಅವರ ಮಕ್ಕಳಿಗೂ ಹಕ್ಕಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಮಾರಾಟ ಮಾಡುವಾಗ ಅವರ ಹಿರಿಯ ಮಗ ಮಾತ್ರ ಸಹಿ ಮಾಡಿರುತ್ತಾರೆ. ಉಳಿದವರು ಕ್ರಯ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿ ಮತ್ತು ಅವರ ಹಿರಿಯ ಮಗ

ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹಾರೋಹಳ್ಳಿ ಪಂಚಾಯಿತಿರವರು ಕ್ರಮ ಸಂಖ್ಯೆ 219, 220 ನಿವೇಶನಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿರುವ ಬಗ್ಗೆ ಗೊತ್ತಿಲ್ಲ. 2 ನಿವೇಶನಗಳಲ್ಲಿ 1 ನೇ ಪ್ರತಿವಾದಿ ಮತ್ತು ಅ ವರ ಮಕ್ಕಳು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ನಿವೇಶನದಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಯಾವುದೇ ಕ್ರಯಪತ್ರವನ್ನು ಬರೆದುಕೊಡದೇ ಇದ್ದರೂ ಸಹ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಡಿಸೆಂಬರ್ 2011 ರಲ್ಲಿ ತೊಂದರೆಯನ್ನು ನೀಡಿರುತ್ತಾರೆ. ಪ್ರತಿವಾದಿಗಳು ಬೆಳಿಗ್ಗೆ 10 ಗಂಟೆಗೆ ನಾವು ಕಟ್ಟುತ್ತಿದ್ದ ಮನೆ ಹತ್ತಿರ ಬಂದಿರುತ್ತಾರೆ. ನಾನು ವಾದ ಪತ್ರದಲ್ಲಿ ಪ್ರತಿವಾದಿಗಳು 10 ಗ ಂಟೆಗೆ ಬಂದು ತೊಂದರೆಯನ್ನು ನೀಡಿದ್ದರು ಎನ್ನುವ ಬಗ್ಗೆ ಹೇಳಿರುತ್ತೇನೆ. ಜನವರಿ 2012 ರಲ್ಲಿ ದಾವೆಯನ್ನು ಹೂಡಿರುತ್ತೇನೆ.

1 ನೇ ಪ್ರತಿವಾದಿ ಮರಿಯಮ್ಮ, ರೇಣುಕಾ ಮತ್ತು ಶಿವರಾಜು ರವರು ಬಂದು ತೊಂದರೆಯನ್ನು ನೀಡಿರುತ್ತಾರೆ. ಪ್ರತಿವಾದಿಗಳೇ ಸ್ವಾಧೀನದಲ್ಲಿ ಇರುವುದರಿಂದ ಅವರು ತೊಂದರೆ ಕೊಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 12.01.2012 ರಲ್ಲಿ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ದೂರನ್ನು ನೀಡಿರುತ್ತೇವೆ. ಪ್ರತಿವಾದಿಗಳ ವಿರುದ್ಧ ದೂರನ್ನು ನೀಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ಪ್ರತಿವಾದಿಗಳ ವಿರುದ್ಧ ದೂರನ್ನು ನೀಡದೆ ಇದ್ದರೂ ಸಹ ದೂರನ್ನು ನೀಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಯಾಗಿದ್ದರಿಂದ ಸಾವಿತ್ರಮ್ಮ ರವರಿಗೆ ಮಾಡುವ ಹಕ್ಕು ಇರಲಿಲ್ಲ ಹಾಗೂ ಮಾರಾಟ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರು ಖರೀದಿ ಮಾಡಿದ ಕ್ರಯ ಪತ್ರವನ್ನು ನಾನು ಪಡೆದುಕೊಂಡಿರುವುದಿಲ್ಲ. ನಿಪಿ-9 ರಲ್ಲಿ ಸಾವಿತ್ರಮ್ಮ ನವರಿಗೆ ಮರಿಯಮ್ಮ ಮತ್ತು

ಅವರ ಮಗ ಇಬ್ಬರೂ ಸೇರಿ ಮಾರಾಟ ಮಾಡುತ್ತಿರುವ ಬಗ್ಗೆ ಒಕ್ಕಣೆ ಇರುವುದಿಲ್ಲ ಸಾಕ್ಷಿ ಮುಂದುವರೆದು ಮರಿಯಮ್ಮ ರವರ ಮಗ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ಕ್ಕೆ 1 ನೇ ಪ್ರತಿವಾದಿಯ ಮಗ ಸಾಕ್ಷಿಯಾಗಿ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವಿದ್ಯಾವಂತೆ ಎಂದರೆ ಸರಿ. 1 ನೇ ಪ್ರತಿವಾದಿ ಅವಿದ್ಯಾವಂತರಾದ ಕಾರಣ ನಿಪಿ-9 ಅನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ